**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಗಳವರ ನ್ಯಾಯಾಲಯ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ**

ಓ ಎಸ್ ನಂ. **48/2019**

ಸಿ ಡಬ್ಲ್ಯು: 1

| | |
|---|---|
| ಸಾಕ್ಷಿಯ ಹೆಸರು | ಬಿ ಎನ್ ಉಮೇಶ |
| ತಂದೆಯ ಹೆಸರು | ನಾಗಪ್ಪ |
| ವಯಸ್ಸು | 51 ವರ್ಷ |
| ಉದ್ಯೋಗ | ಭೂ ಮಾಪಕರು |
| ವಾಸ | ಕಡೂರು |

ದಿನಾಂಕ 10-09-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ:

ನಾನು ಕಳೆದ **1** ವರ್ಷದಿಂದ ಕಡೂರಿನಲ್ಲಿ ಕಡೂರು ತಾಲ್ಲೂಕು ಕಚೇರಿಯಲ್ಲಿ ಭೂ ಮಾಪಕನಾಗಿ ಸೇವೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ದಾವೆಗೆ ಸಂಬಂದಪಟ್ಟಂತೆ ಮಾನ್ಯ ನ್ಯಾಯಾಲಯದ ಆದೇಶದಂತೆ ನಾನು ಸ್ಥಳ ತನಿಖೆ ಕೈಗೊಂಡು ದಿನಾಂಕ **05/07/2025** ರ ಪತ್ರದಂತೆ ಮಾನ್ಯ ನ್ಯಾಯಾಲಯಕ್ಕೆ ನನ್ನ ಸಂಪೂರ್ಣ ವರದಿಯನ್ನು ಸ್ಕೆಚ್ ಹಾಗೂ ಇತರೇ ದಾಖಲೆಗಳೊಂದಿಗೆ ಸಲ್ಲಿಸಿರುತ್ತೇನೆ. ಸದರಿ ವರದಿಯನ್ನು ಒಟ್ಟಾಗಿ ನಿಸಿ-**1** ಎಂದು ಗುರುತಿಸಲಾಯಿತು. ಸದರಿ ವರದಿಗೆ ವಾದಿ ಪರ ವಕೀಲರು ತಕರಾರು ಸಲ್ಲಿಸಿದ್ದು, ಸದರಿ ತಕರಾರಿಗೆ ಸಂಬಂಧಿಸಿದಂತೆ ನಾನು ಮತ್ತೊಂದು ಎರಡನೇ ಹೆಚ್ಚುವರಿಸ್ಕೆಚನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಹೆಚ್ಚುವರಿ ಸ್ಕೆಚನ್ನು ನಿಸಿ-**2** ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರಃ ಶ್ರೀ ಬಿ ಎಂ ಪಿ ವಕೀಲರಿಂದಃ</u>

ನಾನು ಸ್ಥಳ ತನಿಖೆ ಮಾಡಿದ ಸಮಯದಲ್ಲಿ ಸಹ ಸಂಬಂದಪಟ್ಟ ವಕೀಲರು ಸಲ್ಲಿಸಿರುವ ಮೊಮೋ ಆಫ್ ಇನಸ್ಟ್ರಕ್ಷನ್ ಪರಿಶೀಲಿಸಿ ಅದರಂತೆ ವರದಿ ಸಲ್ಲಿಸಿರುತ್ತೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ರೀತಿ ಸ್ಥಳ ತನಿಖೆ ಮಾಡಿದ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿಗಳು ಹಾಜರಿದ್ದರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಸಿ-2 ರ ಹೆಚ್ಚುವರಿ ಸ್ಕೆಚನ್ನು ಸ್ವಲ್ಪ ವಾದಿ ಮತ್ತು ಪ್ರತಿವಾದಿಗಳು ಎಂಬ ಸ್ಥಳದಲ್ಲಿ ವ್ಯತ್ಯಾಸ ಆದ್ದರಿಂದ ಅದನ್ನು ಸರಿ ಪಡಿಸಿ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಸಿ-1 ರ ನಕಾಶೆಯಲ್ಲಿ ಕ್ರಮಸಂಖ್ಯೆ ಎರಡಲ್ಲಿ ಕಾಣಿಸಿರುವ ಸೋಮಪ್ರಸನ್ನರವರಿಗೆ ಕಾಣಿಸಿರುವ ವಿಸ್ತೀರ್ಣದಲ್ಲಿ 19 ಗುಂಟೆ ಕಡಿಮೆ ಎಂದು ಕಾಣಿಸಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಅನುಭವದಂತೆ ಎಂದು ನುಡಿಯುತ್ತಾರೆ. ಅದೇರೀತಿ ರೋಮನ್ ಅಂಕಿ 3 ರ ಗೋವಿಂದಪ್ಪ ಬಿನ್ ಮರಿಯಪ್ಪರವರು ¼ ಗುಂಟೆ ವಿಸ್ತೀರ್ಣದಲ್ಲಿ ಹೆಚ್ಚುವರಿ ಅನುಭವ ಹೊಂದಿರುತ್ತಾರೆಂದು ತೋರಿಸಿರುತ್ತೇನೆ ಎಂದರೆ ಸರಿ. 1 ಮತ್ತು 4 ಬ್ಲಾಕ್ ನಲ್ಲಿ ಕಾಣಿಸಿರುವ ವ್ಯಕ್ತಿಗಳು 18 ಮುಕ್ಕಾಲು ಗುಂಟೆ ವಿಸ್ತೀರ್ಣದಲ್ಲಿ ಹೆಚ್ಚುವರಿ ಸ್ವಾಧೀನ ಹೊಂದಿರುತ್ತಾರೆಂದು ತೋರಿಸಿರುತ್ತೇನೆ ಎಂದರೆ ಸರಿ. ಸರ್ವೆ ನಂ.73/1 ರ ಬಹುಮಾಲೀಕತ್ವದ ಪಹಣಿಯಾಗಿದ್ದು 1 ಮತ್ತು 4 ಬ್ಲಾಕ್ ನಲ್ಲಿ

ತೋರಿಸಿರುವ ಪಹಣಿದಾರರಿಗೆ ಯಾವುದೇ ದುರಸ್ತಿಯಾಗದೇ ಗಡಿನಿರ್ಧಾರವಾಗಿರುವುದಿಲ್ಲ, ಆದ್ದರಿಂದ ಒತ್ತುವರಿ ತೋರಿಸಲು ಸಾದ್ಯವಾಗಿರುವುದಿಲ್ಲ. ಆ ರೀತಿ ಪೋಡಿಯಾಗಿಲ್ಲದೆ ಇರುವುದರಿಂದ ನಾನು ನನ್ನ ವರದಿಯಲ್ಲಿ ಯಾವ ಆಧಾರದ ಮೇಲೆ ಕೆಲವರು ಹೆಚ್ಚುವರಿ ವಿಸ್ತೀರ್ಣದ ಜಮೀನಿನ ಅನುಭವ ಮತ್ತು ಕೆಲವರು ಕಡಿಮೆ ವಿಸ್ತೀರ್ಣದ ಜಮೀನಿನ ಅನುಭವ ಹೊಂದಿರುತ್ತಾರೆಂದು ನನ್ನ ವರದಿಯಲ್ಲಿ ಕಾಣಿಸಿರುತ್ತೇನೆ ಎಂದರೆ ಸಾಕ್ಷಿ ಅನುಭವದ ಆಧಾರದಲ್ಲಿ ಎಂದು ನುಡಿಯುತ್ತಾರೆ.

<u>ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ ಡಿ ಎನ್ ಪಿ ವಕೀಲರಿಂದಃ</u>

ನಕಾಶೆ ತಯಾರಿಸಿರುವ ಸ್ವತ್ತಿನಲ್ಲಿ ಮನೆಯನ್ನು ಕಟ್ಟಿಕೊಂಡು ಮುನಿಸಿಪಾಲಿಟಿಯ ಖಾತೆಗಳನ್ನು ಸಹ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ.

<u>ಮರುಸವಾಲುಃ ವಾದಿ ಪರಃ ಶ್ರೀ ಬಿ ಎಂ ಪಿ ವಕೀಲರಿಂದಃ</u>

ಸದರಿ ಸ್ವತ್ತುಗಳು ಈಗಲೂ ಸಹ ಪಹಣಿಯಲ್ಲಿ ಮುಂದುವರೆದಿರುತ್ತವೆ ಎಂದರೆ ಸರಿ. ಸದರಿ ಸ್ವತ್ತಿನಲ್ಲಿ ಅನ್ಯಕ್ರಾಂತವಾಗಿರುವ ಬಗ್ಗೆ ಆರ್ ಟಿ ಸಿಯಲ್ಲಿ ನಮುದಾಗಿದೆಯಾ ಎಂದರೆ ಸಾಕ್ಷಿ ಕೆಲವು ಸ್ವತ್ತುಗಳು ಅನ್ಯಕ್ರಾಂತವಾಗಿದೆ ಕೆಲವು ಆಗಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಕೆಲವು ಸ್ವತ್ತುಗಳು

ಅನ್ಯಕ್ರಾಂತವಾಗಿದ್ದರೂ ಸಹ ಆರ್ ಟಿ ಸಿಯಲ್ಲಿ ಮುಂದುವರೆದಿರುತ್ತದೆ ಎಂದು ನುಡಿಯುತ್ತಾರೆ.

ಮರುವಿಚಾರಣೆಃ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಒ**

**ಸೀನಿಯರ್ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.**
**ಕಡೂರು.**